


ಕ್ಯಾಂಡಿಯಲ್ಲಿನ ಮಹಾ ಬೋಧಿ ಮಂದಿರ

# ಬುದ್ಧನ ಶಾಂತಿಧಾಮ ಶ್ರೀಲಂಕಾದ ಕ್ಯಾಂಡಿ

■ ಡಾ. ನಾಗರಾಜು ಜಿ.ಬಿ. ಬೈರೇನಹಳ್ಳಿ

‘ಆಯು ಬೋವನ್’ ಎಂದು ಹೇಳುತ್ತಾ ಎರಡು ಕೈಗಳನ್ನು ಜೋಡಿಸಿ ನಮಸ್ಕರಿಸುತ್ತಾ ಅತಿಥಿಗಳನ್ನು ಸ್ವಾಗತಿಸುವುದು ಶ್ರೀಲಂಕಾ ದೇಶದ ಪದ್ಧತಿ. ನಮ್ಮಲ್ಲಿ ‘ಆಯುಷ್ಮಾನ್ ಭವ’ ಎನ್ನುವ ಅರ್ಥವುಳ್ಳ, ‘ನೀವು ಆರೋಗ್ಯದಿಂದ ದೀರ್ಘಾಯುಷಿಗಳಾಗಿ ಬದುಕಿ’ ಎಂಬುದು ಇದರ ಅರ್ಥ.

ಶ್ರೀಲಂಕಾ ಎಂಬ ಪುಟ್ಟ ರಾಷ್ಟ್ರವನ್ನು ಹಿಂದೂ ಮಹಾಸಾಗರದಲ್ಲಿನ ಒಂದು ಮುತ್ತು (**A Pearl in the Indian Ocean**) ಎಂದು ಕರೆಯುತ್ತಾರೆ. ಸುಮಾರು ಎರಡು ಕೋಟಿ ಹತ್ತು ಲಕ್ಷ ಜನಸಂಖ್ಯೆ ಇರುವ, ಬೆಳಿಗ್ಗೆ ಹೊರಟರೆ ಸಂಜೆಗೆ ಇಡೀ ದೇಶವನ್ನೇ ಸುತ್ತಿ ಬಿಡಬಹುದಾದಂತಹ (430x230 ಕಿ.ಮೀ.) ಪುಟ್ಟ ರಾಷ್ಟ್ರಕ್ಕೆ ತಕ್ಕಂತಹ ಪುಟ್ಟದಾದ ಕೊಲೊಂಬೊ ಏರ್‌ಪೋರ್ಟ್‌ನಲ್ಲಿ ಬೆಳಗಿನ ಜಾವ ಐದು ಗಂಟೆಗೆ ಬಂದಿಳಿದ ನಮ್ಮನ್ನು ಹೂವಿನ ಹಾರ ಹಾಕಿ ‘ಆಯು ಬೋವನ್’ ಎಂದು ನಮ್ಮ ಗೈಡ್ ಪ್ರಭಾ ಸ್ವಾಗತಿಸಿದ್ದು, ರಾತ್ರಿ ಪೂರ್ತಿ ಪ್ರಯಾಣ ಮಾಡಿ, ನಿದ್ದೆಗೆಟ್ಟು ಜೋಲುಮೋರೆ ಹೊತ್ತಿದ್ದ ನಮ್ಮ ಮುಖದಲ್ಲಿ ಸ್ವಲ್ಪ ಮಂದಹಾಸ ತಂದಿತ್ತು. ಅವರು ಸ್ವಾಗತಕ್ಕಾಗಿ ಹಾಕಿದ ಹೂವಿನ ಹಾರವನ್ನು ತೆಗೆಯಲು ಯಾರಿಗೂ ಇಷ್ಟವಿರಲಿಲ್ಲ.

ಏರ್‌ಪೋರ್ಟ್‌ನಿಂದ ಇಪ್ಪತ್ತೊಂದು ಕಿಲೋಮೀಟರ್